ಹಿಡಿದು ಬಂದಳು. ಒತ್ತಾಯಕ್ಕೆ ಕೂತು ಕುಡೀತಾಯಿದ್ದ ಕಾಫಿಯ ಲೋಟದಲ್ಲಿ ಎಲಿಸಾಳ ಕಣ್ಣಿಂದ ಅಪ್ರಯತ್ನವಾಗಿ ತೊಟ್ಟಿಕ್ಕಿದ ನಾಲ್ಕು ಹನಿಯೂ ಸೇರಿಕೊಂಡಿತೆ? ಹಾಗನಿಸಿತು. ಅದಾಗಲೇ ಹಣ್ಣಾಗಿದ್ದಾಳೆ. ಜೀವನ ಸಂಗ್ರಾಮದ ವಿಲಕ್ಷಣಗಳೆಲ್ಲಾ ಮೈಮನಗಳಲ್ಲಿ ವ್ಯಾಪಿಸಿದ ಚಡಪಡಿಕೆ ಆಕೆಯಲ್ಲಿದೆ. ಹಿಂದಿನ ಸೌಹಾರ್ದದ ನೆರಳಿಲ್ಲದ ಇಂದಿನ ವಾಸ್ತವ, ಇದೀಗ ಸಮಸ್ಯೆಯ ವಿಹ್ವಲತೆಯೊಂದಿಗೆ ಉದ್ವೇಗವಾಗಿ ನಮ್ಮ ನಡುವೆ ಹರಡಿ ನಿಂತಿತ್ತು. ತನ್ನೆಲ್ಲಾ ಭಾರಗಳೊಂದಿಗೆ ನಮ್ಮನ್ನು ಬೀಳ್ಕೊಟ್ಟು ಗೇಟು ದಾಟಿದ ಎಲಿಸಾಳನ್ನು ಹಿಂಬಾಲಿಸಿದ ಸಂಯುಕ್ತಾಳ ನಡೆ ನನಗರ್ಥವಾಗಲಿಲ್ಲ. ಪರಿಚಯವೇ ಇರಲಿಲ್ಲ. ಮಾತೇನಿರಬಹುದು? ಒಂದಷ್ಟು ಹೊತ್ತು ಕಾದರೂ ಆಕೆ ಹಿಂದೆ ಬರಲಿಲ್ಲ. ನಾನೇ ಹೊರಬಂದು ನೋಡಿದೆ. ಅಲ್ಲೆಲ್ಲೂ ಕಾಣಿಸಲಿಲ್ಲ. ನೆನಪು ಹಸಿಯಾದ ಹಳೆಯ ಹಸಿರು ಹಾದಿಯಲ್ಲಿ ಉಸಿರು ಬಿಗಿಹಿಡಿದು ಎಲಿಸಾಳ ಮನೆಯ ಕಡೆಗೆ ಮೆಲ್ಲನೆ ಮುನ್ನಡೆದೆ. ಸಿಟೌಟಲ್ಲಿ ಕುಳಿತಿದ್ದಾತ ಅಳಿಯನಿರಬಹುದು. ನನ್ನನ್ನು ಕಂಡು ಎದ್ದು ನಿಂತು ಒಳಗಡೆ ಕೈತೋರಿಸಿದ. "ಈ ಹುಡುಗಿ ಹೀಗೆ ಅವಸರದಲ್ಲಿ ಮಗು ನೋಡಲು ಬಂದಿರಬಹುದೇ''– ಒಳಗಡೆ ಕಣ್ಣು ಹಾಯಿಸಿದಾಗ ಪುಟ್ಟರೂಮಿನ ತಿಳಿಬೆಳಕಿನ ನಿಶ್ಚಲಮೌನದಲ್ಲಿ ನಾನು ಕಂಡ ದೃಶ್ಯ ನನ್ನ ಬದುಕಿನ ಅತಿರಮ್ಯ ವಿಸ್ಮಯವಾಗಿತ್ತು!

ಸಂಯುಕ್ತಾಳ ಮಡಿಲಲ್ಲಿ ತೃಪ್ತಿಯಾಗಿ ಎದೆಹಾಲು ಹೀರುತ್ತಿದ್ದ ಪುಟ್ಟಮಗು ನಿರಾತಂಕವಾಗಿ ಮಲಗಿತ್ತು. ಮುಷ್ಟಿಹಿಡಿದ ಮುದ್ದುಕೈಯಲ್ಲಿ ಆಕೆಯದೊಂದು ಬೆರಳಿತ್ತು. ಬಾಣಂತಿ ಹುಡುಗಿ ಗೋಡೆಬದಿಯಲ್ಲಿ ಒತ್ತಿ ಕುಳಿತಿದ್ದಳು. ಆಕೆಯ ಕಣ್ಣುಗಳಲ್ಲಿ ತುಂಬಿಬಂದ ಕಣ್ಣೀರನ್ನು ಒತ್ತಡದ ಆರ್ತಭಾವ ಎಡೆಬಿಡದೆ ಎಳೆದು ಹೊರ ಹರಿಸುತ್ತಿತ್ತು. ಮುಂದೆ ಮಂಡಿಯೂರಿ ಕುಳಿತಿದ್ದ ಎಲಿಸಾ ಬದುಕಿನ ಸದ್ಭಾವವೆಲ್ಲಾ ಒಟ್ಟಾಗಿ ಮತ್ತೆ ಸಂದಾಯವಾಗುತ್ತಿರುವ ಸಂಪನ್ನ ಕ್ಷಣಗಳಿಗೆ ತನ್ನ ಎದೆಬಡಿತವನ್ನು ಹೊಂದಿಸುತ್ತ, ಹಿಂದು ಮುಂದಿಲ್ಲದ ವರ್ತಮಾನದಲ್ಲಿ ತತ್ಪರಳಾಗಿ ಉಳಿದಿದ್ದಳು. ಎಲ್ಲ ವಿಕಾರಗಳನ್ನೂ ಮೀರಿದ ನಿರ್ಭಾವವೊಂದು ನನ್ನನ್ನು ತಡೆದು ನಿಲ್ಲಿಸಿತ್ತು. ಅತ್ಯಂತ ಅನಿರೀಕ್ಷಿತವಾದ ಈ ಮಹಾಪರ್ವ ಕನಸಲ್ಲ ಎಂದು ಖಾತರಿಯಾಗುವುದೆ ಕಷ್ಟವಿತ್ತು. "ಅಮ್ಮಾ... ಅಮ್ಮಾ...'' ಎಂದೇ ಹೃದಯ ಬಡಿಯುತ್ತಿತ್ತು. ಸಮಾಜಮುಖಿಯಾಗಿ ಸಫಲಜೀವನ ನಡೆಸಿದವರಿಗೆ ಮರಣವೊಂದು ಅಂತ್ಯವಾಗುವಂತಿಲ್ಲ. ಸದ್ಭಾವನೆಯೊಂದು ಅವಶೇಷವಾಗಿ ಅಲ್ಲುಳಿದಿರುತ್ತದೆ. ಅಮ್ಮನ ಜೀವತತ್ವ ಹೊಸ ಮನ್ವಂತರದಲ್ಲಿ ಮತ್ತೆ ಸುತ್ತಿ ಬಂತೇ? ಸಂಯುಕ್ತಾಳನ್ನು ಹಿಂದಿನಿಂದಲೇ ಮೆಲ್ಲನೆ ನನ್ನೆರಡೂ ಕೈಗಳಿಂದ ತಬ್ಬಿ ಹಿಡಿದು, ಪುಟ್ಟ ಮಗುವಿನ ಸುಕೋಮಲ ಕಂಪು ಕವಿದು ನಿಂತ ಆಕೆಯ ನೆತ್ತಿಯ ಮೇಲೆ ಮೆಲ್ಲನೆ ಒಂದು ಹೂಮುತ್ತನ್ನೊತ್ತಿದೆ. ಎರಡು ಹನಿ ಕಣ್ಣೀರು ಪನ್ನೀರಿನಂತೆ ಜತೆನೀಡಿತು!

## ಶಶಿಕಲಾ ಬಾಯಾರು


ಕಾಸರಗೋಡು ಜಿಲ್ಲೆಯ ಪೆರ್ಲ ಹುಟ್ಟೂರು. ಗಡಿನಾಡ ಬಾಯಾರು ವಾಸವಿರುವ ಊರು. ಕಸೂತಿ ಕಲೆಯಲ್ಲಿ ಹೆಚ್ಚಿನ ಆಸಕ್ತಿ ಮತ್ತು ಸ್ವಯಂ ಪರಿಶ್ರಮದ ಪರಿಣತಿ. ವಿಭಿನ್ನ ಶೈಲಿಯ ಚಿತ್ರಗಳಿಗೆ ಪ್ರದರ್ಶನಗಳಲ್ಲಿ ಪ್ರಶಂಸೆ ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆ. ಪತ್ರ ಸಾಹಿತ್ಯದಲ್ಲಿ ಹೆಚ್ಚಿನ ಅಭಿರುಚಿ. ಪತ್ರಿಕೆಗಳಲ್ಲಿ ಪ್ರಕಟವಾದ ಹಲವಾರು ಪತ್ರಗಳು 'ಪತ್ರಾರ್ಜಿತ' ಎನ್ನುವ ಪುಸ್ತಕ ರೂಪ ಪಡೆದಿವೆ.